ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 3, July-August 2026, Pp. 6-11
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಕನ್ನಡ ಕಥಾಲೋಕವನ್ನು ಸಮೃದ್ಧಗೊಳಿಸಿದ ಕತೆಗಾರ್ತಿಯರು

ಡಾ. ಯಲ್ಲಮ್ಮ ಕೆ[1] ಮತ್ತು ಮೀನಾಕ್ಷಿ ಎನ್. ಪಿ[2]
[1]ಸಹಾಯಕ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ವಿಭಾಗ ಜಿ.ವಿ.ಪಿ.ಪಿ.ಸ.ಪ್ರ.ದ.ಕಾಲೇಜು, ರಾಮನಗರ, ಹಗರಿಬೊಮ್ಮನಹಳ್ಳಿ, ವಿಜಯನಗರ ಹಾಗೂ ಮಾರ್ಗದರ್ಶಕರು, ಗಂಗಾವತಿ ಭಾಗ್ಯಮ್ಮ ಗ್ರಾಮೀಣ ಪದವಿ ಮಹಾವಿದ್ಯಾಲಯ, ಹೂವಿನಹಡಗಲಿ
[2]ಸಂಶೋಧನಾ ವಿದ್ಯಾರ್ಥಿ, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ ಹಂಪಿ ಹಾಗೂ ಕನ್ನಡ ಸಹಾಯಕ ಪ್ರಾಧ್ಯಾಪಕರು, ದಯಾನಂದ ಸಾಗರ ಆರ್ಟ್ಸ್, ಸೈನ್ಸ್ ಆಂಡ್ ಕಾಮರ್ಸ್ ಕಾಲೇಜು, ಬೆಂಗಳೂರು

***Abstract:***
*ಕನ್ನಡ ಸಾಹಿತ್ಯದಲ್ಲಿ ಸಣ್ಣಕಥೆಯು ಅತ್ಯಂತ ಜನಪ್ರಿಯ ಸಾಹಿತ್ಯ ಪ್ರಕಾರವಾಗಿ ಬೆಳೆಯುವುದರೊಂದಿಗೆ ಮಹಿಳಾ ಲೇಖಕಿಯರು ತಮ್ಮ ಅನುಭವ, ಸಂವೇದನೆ ಮತ್ತು ಸಾಮಾಜಿಕ ಅಸ್ತಿತ್ವವನ್ನು ಅಭಿವ್ಯಕ್ತಿಸುವ ಪ್ರಮುಖ ಮಾಧ್ಯಮವಾಗಿ ಅದನ್ನು ಬಳಸಿಕೊಂಡಿದ್ದಾರೆ. ಈ ಲೇಖನವು ಕನ್ನಡ ಮಹಿಳಾ ಕಥಾಸಾಹಿತ್ಯದ ಬೆಳವಣಿಗೆಯ ಕ್ರಮವನ್ನು ಐತಿಹಾಸಿಕ ಮತ್ತು ಸಾಮಾಜಿಕ ಜಾಗೃತಿಯ ಪರಿಣಾಮವಾಗಿ ಮಹಿಳೆಯರು ಸಾಹಿತ್ಯ ಕ್ಷೇತ್ರದಲ್ಲಿ ತಮ್ಮದೇ ಆದ ಸ್ಥಾನವನ್ನು ನಿರ್ಮಿಸಿಕೊಂಡಿರುವುದನ್ನು ಲೇಖನವು ವಿಶ್ಲೇಷಿಸುತ್ತದೆ. ಅಕ್ಕಮಹಾದೇವಿಯಿಂದ ಆರಂಭಗೊಂಡು ಕೊಡಗಿನ ಗೌರಮ್ಮ, ತ್ರಿವೇಣಿ, ವೈದೇಹಿ, ಗೀತಾ ನಾಗಭೂಷಣ ಸೇರಿದಂತೆ ಅನೇಕ ಲೇಖಕಿಯರ ಕೃತಿಗಳ ಮೂಲಕ ಮಹಿಳೆಯರ ಜೀವನಾನುಭವ, ಕುಟುಂಬ ವ್ಯವಸ್ಥೆ, ಲಿಂಗ ಸಮಾನತೆ, ಸಾಮಾಜಿಕ ಶೋಷಣೆ, ಸ್ವಾತಂತ್ರ್ಯದ ಆಶಯ ಮತ್ತು ಅಸ್ತಿತ್ವದ ಹುಡುಕಾಟವು ಹೇಗೆ ವ್ಯಕ್ತವಾಗಿದೆ ಎಂಬುದನ್ನು ಲೇಖನವು ವಿವರಿಸುತ್ತದೆ. ಮಹಿಳಾ ಕಥಾಸಾಹಿತ್ಯವು ಕೇವಲ ಮಹಿಳೆಯರ ಬದುಕಿನ ಚಿತ್ರಣಕ್ಕೆ ಸೀಮಿತವಾಗದೆ, ಸಮಾಜದಲ್ಲಿನ ಅಸಮಾನತೆಗಳನ್ನು ಪ್ರಶ್ನಿಸುವ ಹಾಗೂ ಹೊಸ ಸಾಮಾಜಿಕ ದೃಷ್ಟಿಕೋನವನ್ನು ರೂಪಿಸುವ ಸೃಜನಾತ್ಮಕ ಶಕ್ತಿಯಾಗಿ ಬೆಳೆಯುತ್ತಿದೆ ಎಂಬುದು ಈ ಲೇಖನದ ಪ್ರಮುಖ ಪ್ರತಿಪಾದನೆಯಾಗಿದೆ.*

***Keywords:*** *ಕನ್ನಡ ಮಹಿಳಾ ಸಾಹಿತ್ಯ, ಮಹಿಳಾ ಸಂವೇದನೆ, ಮಹಿಳಾ ಅಭಿವ್ಯಕ್ತಿ, ಮಹಿಳಾ ಅಸ್ತಿತ್ವ, ಪುರುಷ ಪ್ರಧಾನ ಸಮಾಜ, ಸಾಮಾಜಿಕ ಪರಿವರ್ತನೆ.*

## ಪೀಠಿಕೆ

ಬಹಳ ಜನಪ್ರಿಯ ಸಾಹಿತ್ಯ ಪ್ರಕಾರಗಳಲ್ಲಿ ಸಣ್ಣಕಥೆಯೂ ಒಂದು. **ಕಥೆಯನ್ನು ಹೇಳುವುದು ಹಾಗೂ ಕೇಳುವುದು ಮಾನವನ ಹುಟ್ಟುಗುಣ.** ನಮ್ಮ ಹಿರಿಯರು ತಮ್ಮ ಮಕ್ಕಳಲ್ಲಿ ಆಸಕ್ತಿ ಕೆರಳಿಸಿ ಕುತೂಹಲ ಉಂಟುಮಾಡಲು, ಮನಸ್ಸಿಗೆ ಮುದ ನೀಡಲು ಮನಸ್ಸನ್ನರಳಿಸುವ ಕಥೆಗಳನ್ನು ಹೇಳುತ್ತಿದ್ದರು. ಈ ಕಥನ ಕಲೆ ವಿಸ್ತಾರಗೊಂಡು ಕೆಲವು ಸಾಹಿತಿಗಳು ವಸ್ತು, ಶೈಲಿ, ನಿರೂಪಣೆಗಳೆಲ್ಲದರಲ್ಲಿಯೂ ಪರಿಣಾಮಕಾರಿಯಾದ ಮಾರ್ಪಾಡುಗಳನ್ನು ಮಾಡಿ ಸಣ್ಣಕಥೆ ಎಂಬ ಸಾಹಿತ್ಯ ಪ್ರಕಾರವನ್ನು ಪ್ರಚುರಗೊಳಿಸಿದರು. **ಸಂಕ್ಷಿಪ್ತತೆ ಮತ್ತು ವಾಸ್ತವತೆಗಳು** ಇದರ ಮುಖ್ಯ ಗುಣಗಳಾಗಿವೆ. ಶಿಕ್ಷಣ,

***Please cite this article as:*** ಯಲ್ಲಮ್ಮ, ಕೆ ಮತ್ತು ಮೀನಾಕ್ಷಿ, ಎನ್.ಪಿ. (2026). ಕನ್ನಡ ಕಥಾಲೋಕವನ್ನು ಸಮೃದ್ಧಗೊಳಿಸಿದ ಕತೆಗಾರ್ತಿಯರು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್*, 5(3), 6–11

ಬದುಕಿನ ಏಳು–ಬೀಳುಗಳು, ಸ್ವ–ಉದ್ಯೋಗ, ವಿಜ್ಞಾನ ಮೊದಲಾದವುಗಳು ಸಣ್ಣಕಥೆಗೆ ವಸ್ತುಗಳಾಗಿವೆ.

**ಕಥೆಗಳು ಹುಟ್ಟಲು ನಿಶ್ಚಿತ ಸಮಯ–ಸಂದರ್ಭ, ಸಂಭಾಷಣೆ, ವ್ಯವಧಾನಗಳು ಬೇಕಿಲ್ಲ. ಮೌನದಲ್ಲೂ ನೂರಾರು ಕತೆಗಳು ಅರಳುತ್ತವೆ.** ಮನುಷ್ಯನ ಭಾಷೆ, ಲಯ, ಭಾವನೆಗಳು, ಹೊಯ್ದಾಟ, ತುಡಿತ–ಮಿಡಿತ–ತುಮುಲಗಳಷ್ಟೇ ಕಥಾಚೌಕಟ್ಟಿಗೊಳಪಡದೆ, ಈ ಸೃಷ್ಟಿಯ ಚರಾಚರವಸ್ತುಗಳೆಲ್ಲವೂ ಕಥೆಗೆ ವಸ್ತುಗಳಾಗಬಲ್ಲವು. ಸಾಮಾಜಿಕ ಮೌಲ್ಯಗಳು, ಸುಧಾರಣೆ ಹಾಗೂ ಜೀವನಾನುಕಂಪದೊಂದಿಗೆ ಬೆಳೆದ ಕನ್ನಡ ಕಥಾಪರಂಪರೆ ವಿವಿಧ ಕಾಲಘಟ್ಟಗಳಲ್ಲಿ ಮನೋವಿಶ್ಲೇಷಣಾತ್ಮಕ, ಮಣ್ಣಿನ ವಾಸನೆ, ಗ್ರಾಮ್ಯ ಪರಿಸರ, ವಿಶಿಷ್ಟ ಭಾಷಾಪ್ರಯೋಗ, ಸಾಮಾಜಿಕ ಅಸಮಾನತೆ ಅನ್ಯಾಯದ ವಿರುದ್ಧ ಚಳವಳಿಯಾಗಿ, ತಾತ್ವಿಕನೆಲೆಗೆ ಮುಖಾಮುಖಿಯಾಗಿ, ಗೊಡ್ಡು ಸಂಪ್ರದಾಯಗಳಿಗೆ ಸವಾಲಾಗಿ, ಜನರ ಒಳತೋಟಿ, ವೈವಿಧ್ಯಮಯ ಬದುಕು, ಜಾಗತೀಕರಣ, ಉದಾರೀಕರಣ, ಖಾಸಗೀಕರಣ ವಿರುದ್ಧದ ಅಕ್ಷರರೂಪದ ಹೋರಾಟವಾಗಿ, ಮಾನವಪ್ರೇಮವನ್ನು ಎತ್ತಿ ಹಿಡಿಯುವ ಕನ್ನಡ ಸಣ್ಣಕಥಾಪರಂಪರೆಯು ತನ್ನದೇ ಆದ ವಿಶಿಷ್ಟ ಹಾಗೂ ಪ್ರಾದೇಶಿಕತೆಯನ್ನು ಮೈಗೂಡಿಸಿಕೊಂಡು ಬೆಳೆದಿದೆ. ಸಣ್ಣಕಥೆಗಳ ಈ ಸಾಹಿತ್ಯ ಓದುಗರಲ್ಲಿ ಆಸಕ್ತಿಯನ್ನು ಮೂಡಿಸಲು ಅವು ಬಿಂಬಿಸುವ ಬದುಕಿನ ಚಿತ್ರಣವೇ ಕಾರಣ. ಓದುಗರ ಸಂಖ್ಯೆ ಕಡಿಮೆಯಾಗುತ್ತಿದೆ ಎಂಬ ಆತಂಕದ ಮಧ್ಯೆಯೂ ಕಥಾಜಗತ್ತು ಸೊರಗಿಲ್ಲ. ಆಧುನಿಕ ಮಾಧ್ಯಮಗಳ ಬಳಕೆಯೊಂದಿಗೆ ಸಣ್ಣಕಥೆ ಹೊಸರೂಪ –ದೊಂದಿಗೆ ಜಗತ್ತಿನ ಮೂಲೆಮೂಲೆಯಲ್ಲೂ ಇರುವ ಕನ್ನಡ ಓದುಗರನ್ನು ಆಕರ್ಷಿಸುವಲ್ಲಿ ಯಶಸ್ವಿಯಾಗಿವೆ. ವಿವಿಧ ಪತ್ರಿಕೆಗಳು, ಸಾಹಿತ್ಯ ಸಂಘ, ಸಂಸ್ಥೆ, ಕಥಾಪರಂಪರೆ ಸಾಗುತ್ತಿರುವ ಹೊಸದಿಕ್ಕಿಗೂ ಮುನ್ನುಡಿಯಾಗಿದೆ.

ವೇದಕಾಲದಲ್ಲಿ ಸ್ತ್ರೀಯರಿಗೆ ಅಭಿವ್ಯಕ್ತಿ ಸ್ವಾತಂತ್ರ್ಯವಿತ್ತು ಎಂದು ಹೇಳಿ **ಮೈತ್ರಿ, ಗಾರ್ಗಿ** ಮುಂತಾದ ಕೆಲವೇ ಕೆಲವು ಬೆರಳೆಣಿಕೆಯಷ್ಟು ಹೆಸರುಗಳನ್ನು ಸೂಚಿಸುವರಾದರೂ ನಂತರದ ಯುಗದಲ್ಲಿ **ಪುರುಷ ಮೇಲು, ಮಹಿಳೆ ಕೀಳು ಎಂಬ, ಅವಳು ಅವನು ಹೇಳಿದಂತೆ ಕೇಳಿಕೊಂಡು ಬಿದ್ದಿರಬೇಕಾದವಳು, ಅವಳಿಗೇಕೆ ಶಿಕ್ಷಣ? ಅವಳು ಕೇವಲ ಭೋಗದ ವಸ್ತುವಾಗಿ ಬದುಕಬೇಕೆಂಬ ಧಾರ್ಷ್ಟದ ನಡೆವಳಿಕೆ ಪುರುಷಲೋಕದಲ್ಲಿ ಕಂಡುಬಂದಿತು.** ಹೀಗಾಗಿ ಸ್ತ್ರೀ ಸಾಹಿತ್ಯ ರಚನೆಯಲ್ಲಿ ಹಿಂದೆ ಬಿದ್ದಳು. ಅವಳು ಶಿಕ್ಷಣದಿಂದ ಅದರ ಮೂಲಕವಾದ ಅಭಿವ್ಯಕ್ತಿ ಸ್ವಾತಂತ್ರ್ಯದಿಂದ ವಂಚಿತಳಾದಳು.

ಸಾವಿರದ್ಯೆನೂರು ವರ್ಷಗಳ ಕನ್ನಡ ಸಾಹಿತ್ಯ ಚರಿತ್ರೆಯನ್ನು ಗಮನಿಸಿದಲ್ಲಿ ಇಪ್ಪತ್ತನೆಯ ಶತಮಾನದವರೆಗೂ ಮಹಿಳೆಯರು ರಚಿಸಿದ ಮಹಿಳಾ ಸಾಹಿತ್ಯದಲ್ಲಿ ವಿಶೇಷವಾದದ್ದೇನೂ ಕಂಡುಬರಲಿಲ್ಲ. ಶಿಕ್ಷಣವಂಚಿತಳಾದ ಸ್ತ್ರೀ ಪುರುಷಪ್ರಧಾನ ಜಗತ್ತಿನ ಸಾಮಾಜಿಕ ವ್ಯವಸ್ಥೆಯಲ್ಲಿ ಸಾರ್ವಜನಿಕ ಜೀವನದಲ್ಲಿ ಭಾಗಿಯಾಗುವ ಹೆಚ್ಚಿನ ಅವಕಾಶಗಳಿಂದ ವಂಚಿತಳಾದಳು. ಹಾಗೆ ನೋಡಿದರೆ ಇಪ್ಪತ್ತನೆಯ ಶತಮಾನದವರೆಗೂ ಯಾವ ಮಹಿಳೆಯೂ ತನ್ನ ಮನದ ತುಮುಲಗಳನ್ನು ಹೊರಹಾಕಿರುವ ಉದಾರಣೆಗಳಿಲ್ಲ; ಹದಿಬದೆಯ ಧರ್ಮದ ಸಂಚಿಹೊನ್ನಮ್ಮ, ಹೆಳವನಕಟ್ಟೆ ಗಿರಿಯಮ್ಮ, ಜಾನಪದಲೋಕದ ಗರತಿಯೇ ಇರಲಿ ಎಲ್ಲರೂ ಬರೆದಿರುವುದು ಕೇವಲ ತ್ಯಾಗದ ಉಪದೇಶ, ದೇವತೆಯಾಗಿ ಪರಿವರ್ತಿತವಾಗುವ ಹೆಣ್ಣಿನ ವ್ಯಕ್ತಿತ್ವ ಇತ್ಯಾದಿಗಳ ಬಗ್ಗೆಯೇ. **ಹೆಣ್ಣು ಗಂಡಿನಂತೆಯೇ ಮನುಷ್ಯಜೀವಿ, ಅವಳಿಗೂ ಭಾವನೆಗಳಿವೆ, ಬೇಕು–ಬೇಡಗಳಿವೆ, ಇಷ್ಟಾನಿಷ್ಟಗಳಿವೆಂಬುದನ್ನು ಅರಿಯುವ ಪ್ರಯತ್ನ ಮಾಡಲಿಲ್ಲ,** ಅರುಹುವ ಅವಕಾಶ ಕೊಡಲಿಲ್ಲ, ಸಮಯ ನೀಡಲಿಲ್ಲ.

ಸುಮಾರು ಹನ್ನೆರಡನೆಯ ಶತಮಾನದ ವಚನಕಾರರಲ್ಲಿ ಮಹಿಳಾ ವಚನಕಾರ್ತಿಯಾಗಿ ಅಕ್ಕಮಹಾದೇವಿ ಮಾತ್ರ ಸ್ತ್ರೀ–ಜಗತ್ತಿನ ತಲ್ಲಣಗಳಿಗೆ

ದನಿಯಾಗಿ ನಿಲ್ಲುತ್ತಾಳೆ. ಈಕೆಯನ್ನು ಕಾಡಿದ ಒಂದು ಬಹುಮುಖ್ಯ ಅಂಶವೆಂದರೆ? **ಜೈವಿಕತೆಯ, ಭೋಗದ ನೆಲೆಯಲ್ಲಿ ಮನುಷ್ಯರನ್ನು ಗಂಡಾಗಿ, ಹೆಣ್ಣಾಗಿ ಕಾಣುವಿಕೆ. ಇದನ್ನು ಆಕೆ ಮನದ ಸೂತಕ**ವೆಂದೇ ಕರೆದಿದ್ದಾಳೆ. ಅಂದಿನ ಕಾಲಘಟ್ಟದ ಸಮಾಜವನ್ನು ದೃಷ್ಟಿಯಲ್ಲಿರಿಸಿ –ಕೊಂಡು ನೋಡಿದಾಗ ಅಕ್ಕಮಹಾದೇವಿಯಿಂದ ವಿಭಿನ್ನ ದನಿ ಹೊರಟಿರುವುದು ಗಮನಾರ್ಹ ಸಂಗತಿಯಾಗಿದೆ. ಹೆಣ್ಣನ್ನು ದೇಹವಾಗಿ ಕಾಣುತ್ತ ಅವಳ ವ್ಯಕ್ತಿತ್ವದ ಇತರ ಆಯಾಮಗಳನ್ನು ಅಲ್ಲಗಳೆಯುತ್ತ ಸಾಗಿದ್ದ ಚರಿತ್ರೆಗೆ ಅಕ್ಕನ ಬದುಕು ಒಂದು ಉತ್ತರವಾಗಿದೆ. ಹೆಣ್ಣು ದೇಹದೊಂದಿಗೆ ಹೆಣ್ಣಿನ ವ್ಯಕ್ತಿತ್ವವನ್ನು ಸಮೀಕರಿಸುವುದನ್ನು ಆಕೆ ವಿರೋಧಿಸುತ್ತಾಳೆ. ಹೆಣ್ತನಕ್ಕೆ ಲೋಕ ಹೊರಿಸಿದ ಇತಿ–ಮಿತಿಗಳನ್ನು ಮೀರುವ ಮೀರಿದ್ದನ್ನು ಹೇಳುವ ಒಂದು ಪ್ರಯತ್ನವನ್ನು ಮಾಡುತ್ತಾಳೆ. ಇವೆಲ್ಲವುಗಳ ಜೊತೆಗೆ ಅದುವರೆಗಿನ ಸಮಾಜಕ್ಕೆ ಅಷ್ಟೇನೂ ಪರಚಿತವಲ್ಲದ ಸ್ತ್ರೀ ಬದುಕಿನ ಒಂದು ನೂತನ ಆಯಾಮವನ್ನು ಸ್ಥಾಪಿಸುವಲ್ಲಿ ಸತತ ಪ್ರಯತ್ನವಿದೆ, ಆಕೆಯ ಬದುಕೇ ಹೋರಾಟದ ಹಾದಿಯಾಗಿದೆ.

ತದನಂತರದಿ ಸಂಚಿಹೊನ್ನಮ್ಮ ಪುರುಷ ಪ್ರಾಧಾನ್ಯತೆಯನ್ನು ಸಂಪೂರ್ಣವಾಗಿ ಒಪ್ಪಿಕೊಂಡಿರುವ, ಪುರುಷನ ಸಂತೋಷಕ್ಕಾಗಿ ಹೆಣ್ಣು ದುಡಿಯಬೇಕು, ಅಂದರೆ.., ಕುಟುಂಬದಲ್ಲಿ ಶಾಂತಿ, ನೆಮ್ಮದಿಗಳು ಸಿಗುತ್ತವೆಂಬ ಅಭಿಪ್ರಾಯವನ್ನು ಹೊಂದಿದ ಆಕೆ ಹೆಣ್ತನಕ್ಕೆ ಆದರ್ಶಪ್ರಾಯವೆನಿಸುವಂಥ ಹದಿಬದೆಯ ಧರ್ಮವೆಂಬ ಕೃತಿಯನ್ನು ರಚಿಸಿದಳಾದರೂ ಆಕೆಯಲ್ಲಿಯೂ ಕೂಡ ಹೆಣ್ಣಿನ ಮೇಲಾಗುವ ಅನ್ಯಾಯಗಳಿಗೆ ವಿರುದ್ಧವಾಗಿ ಒಂದು ಸಣ್ಣ ತಣ್ಣನೆಯ ಪ್ರತಿರೋಧದ ಎಳೆಯನ್ನು ನಾವು ಆಕೆಯ ನುಡಿಗಳಲ್ಲಿ ವ್ಯಕ್ತವಾಗಿರುವುದನ್ನು ನೋಡಬಹುದಾಗಿದೆ. ಉದಾ: **"ಕುವರನಾದೊಡೆ ಬಂದ ಗುಣವೇನದರಿಂದ..? ಕುವರಿಯಾದೊಡೆ ಕುಂದೇನು..? ಹೆಣ್ಣು ಹೆಣ್ಣೆಂದೇತಕೆ ಬೀಳುಗಳೆವರು ಕಣ್ಣು ಕಾಣದ ಗಾವಿಲರು.."** ಎಂದು ಮೆಲುದನಿ ಎತ್ತುತ್ತಾಳೆ. ಜನಪದ ಸಾಹಿತ್ಯದ ಗರತಿಯರದ್ದೂ ಇದೇ ಮನೋಗತವನ್ನು ಹೊಂದಿರುವುದನ್ನು ಕಾಣುತ್ತೇವೆ. ಉದಾ: ಹೆಣ್ಣು ಪತಿಯ ಅನ್ಯಾಯಗಳಿಗೆ ಪ್ರತಿಯಾಗಿ ಕ್ಷಮಾಗುಣವನ್ನು ರೂಢಿಸಿಕೊಂಡು ಬಾಳಿದರೆ ಅವಳ ಬಾಳು ಹಸನಾಗುತ್ತದೆ ಎಂಬಿತ್ಯಾದಿ ಮಾತುಗಳಿಗೆ ಮಣೆ ಹಾಕಲಾಗಿದೆ ಎಂದು ಹೇಳಬಹುದು.

ಹತ್ತೊಂಬತ್ತನೆಯ ಶತಮಾನದ ಸಾಂಸ್ಕೃತಿಕ ವಾತಾವರಣದಲ್ಲಿ ಮತ್ತೆ ಸ್ತ್ರೀಪರ ಆಲೋಚನೆಗಳು ಅಲ್ಲಲ್ಲಿ ಗೋಚರಿಸತೊಡಗಿದವು. ಇದಕ್ಕೆ ಕಾರಣ ಮಹಿಳೆಗೆ ಅಕ್ಷರಲೋಕದ ಬಾಗಿಲು ತೆರೆದಿತ್ತು. ಇಪ್ಪತ್ತನೆಯ ಶತಮಾನದ ಆದಿಭಾಗದಲ್ಲಿ ಶಾಲಾಶಿಕ್ಷಣ ಪಡೆದ, ಸಾಹಿತ್ಯಾಸಕ್ತಿ ಹೊಂದಿದ ಕೆಲವು ಸ್ತ್ರೀಯರು ಕಾಣಸಿಕ್ಕರೂ ಸಾಹಿತ್ಯ ಕ್ಷೇತ್ರಕ್ಕೆ ಕಾಲಿಡುವ ಧೈರ್ಯ ಮಾಡಿರಲಿಲ್ಲ. ಮಹಿಳೆಯರ ಪರವಾಗಿ ಪುರುಷರೇ ಬರೆಯಬೇಕಾದ ಅನಿವಾರ್ಯತೆ ಎದುರಾಯಿತು. ಆದರೆ ಮಹಿಳೆ ಹಾಗೂ ಪುರುಷರ ಜೀವನಾನುಭವಗಳು ವಿಭಿನ್ನ. ಪುರುಷನಿಗೆ ಮಾತೃತ್ವ, ಲೈಂಗಿಕತೆಯಂಥ ಸ್ತ್ರೀತ್ವದ ಅನುಭವಗಳ ಪರಿಚಯವಿರುವುದಿಲ್ಲ, ಅವನು ಬರೆಯುವುದು ಸ್ತ್ರೀಲೋಕದ ಅರಿವಿಲ್ಲದ ಸಾಹಿತ್ಯ. ಆಕೆಯ ಅಂತರಂಗದ ತೀರಾ ಖಾಸಗಿವಿಚಾರ, ಆಶೋತ್ತರ, ಮಹಿಳಾ ಅಭಿವ್ಯಕ್ತಿ ಇವು ಅವನಿಂದ ಬಹಳ ದೂರ. ಹೆಣ್ಣುತನಕ್ಕೆ ಅಂಟಿಸಿದ ಮಾದರಿಯ ಆತಂಕಗಳು ಬಹುಶಃ ಪುರುಷರನ್ನು ಕಾಡಿರಲಿಕ್ಕಿಲ್ಲವೇನೋ? ಆ ಬಗ್ಗೆ ಬರೆದರೂ **ಕುರುಡರು ಬಣ್ಣಿಸಿದ ಆನೆಯಂತೆ ಆದೀತು!** ಇದೇ ಕಾರಣದಿಂದಾಗಿ ಆರಂಭಘಟ್ಟದ ಮಹಿಳೆಯರು ತಮ್ಮ ಅನುಭವಗಳನ್ನು ತಮ್ಮ ನೈಜ ಅನಿಸಿಕೆಗಳನ್ನು ಮುಟ್ಟಲು, ತೆರೆದಿಡಲು ಇದ್ದ ಹಿಂಜರಿಕೆ–ಅಂಜಿಕೆ ಪೀಳಿಗೆಯಿಂದ ಪೀಳಿಗೆಗೆ ಹರಿದುಬಂದು ನೂರಾರು ಅನುಭವಗಳು

ಅಭಿವ್ಯಕ್ತಿಗೊಳ್ಳಲು ಅವರಿಗೆ ಅದು ಸೂಕ್ತವಾದ ಸಮಯ –ಸಿಕ್ಕಿರಲಿಕ್ಕಿಲ್ಲವೇನೋ?

ತರುವಾಯ.., ಇಪ್ಪತ್ತನೆಯ ಶತಮಾನದಲ್ಲಿ ಮಹಿಳೆಗೆ ಶಿಕ್ಷಣದ ಜೊತೆಜೊತೆಗೆ ಅಭಿವ್ಯಕ್ತಿಯ ಬಾಗಿಲು ತೆರೆಯಿತು, ತೆರೆದುಕೊಂಡರು ಎಂದು ಹೇಳಬಹದು, ತಮ್ಮ ಬರೆಹದ ಧಾಟಿಯನ್ನು, ಮನೋಧೋರಣೆ ಯನ್ನು ಬದಲಿಸಿಕೊಳ್ಳಲು ಕಾಲಸನ್ನಿಹಿತವಾಯಿತೆನ್ನಬಹದು. ಆ ಕಾಲದಲ್ಲಿ ತಿರುಮಲಾಂಬ, ಸರಸ್ವತಿದೇವಿ ಗೌಡರ, ಶಾಂತಾಬಾಯಿ ನೀಲಗಾರ ಇವರು ಸಾಹಿತ್ಯ ರಚನೆಕಾರರಲ್ಲಿ ಪ್ರಮುಖರು ಎಂದು ಗುರುತಿಸಬಹುದು.

**ಸದ್ಗುಣಿ ಕೃಷ್ಣಾಬಾಯಿ [ಕಾದಂಬರಿ] – ಶಾಂತಾಬಾಯಿ ನೀಲಗಾರ**

ಇದು ಒಬ್ಬ ಉತ್ತಮ ಗೃಹಿಣಿಯಲ್ಲಿರಬೇಕಾದ ಗುಣಗಳನ್ನು ಪ್ರತಿನಿಧಿಸುವ ಕಾದಂಬರಿಯಾಗಿದ್ದು, ಇವರನ್ನು **ಇಪ್ಪತ್ತನೆಯ ಶತಮಾನದ ಮೊದಲ ಕಾದಂಬರಿಗಾರ್ತಿ** ಎಂದು ಪರಿಗಣಿಸಲಾಗಿದೆ. ಇಲ್ಲಿ **ಸ್ತ್ರೀಗೆ ವಿದ್ಯೆಯ ಮಹತ್ವದ ಬಗ್ಗೆ ಹೇಳಿದ್ದರೂ ಅವಳು ಪುರುಷನಿಗೆ ವಿದ್ಯೆಯ ದೆಸೆಯಿಂದ ಹೇಗೆ ಸಹಕಾರಿಯಾಗಬಲ್ಲಳು ಎಂಬುದಕ್ಕೆ ಹೆಚ್ಚು ಒತ್ತನ್ನು ನೀಡಿದ್ದಾರೆ.** ಇವರ ನಂತರದಿ ತಿರುಮಲೆ ರಾಜಮ್ಮಳು – ಭಾರತಿ ಕಾವ್ಯನಾದಿಂದ ಅನೇಕ, ನಾಟಕ, ವ್ಯಕ್ತಿಚಿತ್ರ, ರೂಪಕಗಳನ್ನು ಬರೆದರು. ಬದಲಾದ ಸಾಮಾಜಿಕ ವಾತಾವರಣದಲ್ಲಿ ಸ್ತ್ರೀಯರು ತಮ್ಮ ಲೇಖನದ ಧಾಟಿಯನ್ನು ಬದಲಾಯಿಸಿಕೊಂಡರು. ಅದುವರೆಗೂ ಅಡಿಗೆ ಮನೆಯಿಂದ ಹೊರಬಾರದವರು.., ಈಗ ಸ್ವಾತಂತ್ರ್ಯದ ಚಳವಳಿಯಲ್ಲಿ ಸಕ್ರಿಯವಾಗಿ ಧುಮಿಕಿದರು. ಸಮಾಜವೆಂದರೆ? ಕೇವಲ ಪುರುಷನಲ್ಲ, ಸ್ತ್ರೀಯೂ ಆತನ ಹೆಗಲೆಣೆಯಾಗಿ ಬದುಕಬೇಕಾದಂಥ ಭಾತಿಯವಳು ಎಂಬ ಅರಿವೂ ಮೂಡತೊಡಗಿತು. ಆಗ ತಮ್ಮ ಮನದ ತುಮುಲಗಳನ್ನು ಅಭಿವ್ಯಕ್ತಿಗೊಳಿಸಲು ಅವರು ಹಿಂದೆ–ಮುಂದೆ ನೋಡಲಿಲ್ಲ.

ಇವರ ಮುಂದುವರೆಕೆ ಎಂಬಂತೆ **ಕೊಡಗಿನ ಗೌರಮ್ಮ – ಕನ್ನಡದ ಪ್ರಥಮ ಕತೆಗಾರ್ತಿ** ಎಂದು ಪರಿಗಣಿಸಲಾಗಿದ್ದು, ಇವರು **ಮಿಸೆಸ್ ಟಿ.ಜಿ.ಕೃಷ್ಣ** ಎನ್ನುವ ಹೆಸರಿನಲ್ಲಿ ಕತೆಗಳನ್ನು ಬರೆದಿದ್ದಾರೆ, **ಕಂಬನಿ, ಚಿಗುರು ಹಾಗೂ ಗೌರಮ್ಮನ ಕತೆಗಳು** ಇವರ ಕಥಾಸಂಕಲನಗಳಾಗಿವೆ. ಇವರ ಬಹಮುಖ್ಯ ಕತೆಗಳಲ್ಲೊಂದಾದ ಆಹುತಿ – ಕತೆಯು ವರದಕ್ಷಿಣೆ ಸಮಸ್ಯೆಯ ಕುರಿತಾದುದಾಗಿದೆ. ಐಶ್ವರ್ಯವಂತರ ಅಳಿಯನಾಗಬೇಕೆಂದು ಬಹಳ ಆಸೆಯಿದ್ದ ಎಂ.ಎ. ಪಾಸಾಗಿದ್ದ ಯುವಕ, ಇಂಗ್ಲೆಂಡಿಗೆ ಹೋಗಿ ಬ್ಯಾರಿಸ್ಟರ್ ಆಗಬೇಕೆಂದು ಬಲವಾದ ಇಚ್ಛೆ ಆತನದ್ದು, ಮನೆಯಲ್ಲಿ ನೋಡಿದ ಬಡವರ ಮನೆಯ ಕನ್ಯೆಯನ್ನು ನಿರಾಕರಿಸಿ ಮನೆ ಬಿಟ್ಟು ಮದರಾಸಿಗೆ ಹೋಗಿ ಅಲ್ಲಿ ರೈಲಿನಲ್ಲಿ ಪರಿಚಯವಾದ ರತ್ನದ ವ್ಯಾಪಾರಿಯ ಸಹಾಯದಿಂದ ಅವರ ಮನೆಯಲ್ಲಿ ಗೃಹಪಾಠ ಮಾಡುವ ಕೆಲಸಕ್ಕೆ ಸೇರಿದ, ವ್ಯಾಪಾರಿಯ ಮಗಳು ಸೀತೆ, ಸೊಸೆ ಶಾಂತಿ. ಇವನಿಗೆ ಶಾಂತಿಯ ಮೇಲೆ ಮನಸ್ಸಾಗಿ ಮದುವೆಯಾಗಲು ತೀರ್ಮಾನಿಸಿದ, ಅವನಿಗೆ ಶಾಂತಿಯದ್ದೇ ಜಪ–ತಪವಾಯಿತು. ಹಣಕ್ಕಾಗಿ ಪ್ರೇಮವನ್ನು ಬಲಿ ಕೊಡಬಾರದು ಎಂದು ಅವನ ಮನಸ್ಸು ಹೇಳುತ್ತಿತ್ತು, ಶಾಂತಿಗೆ ಮದುವೆ ನಿಶ್ಚಯವಾಗಿದೆ ಎಂದು ನಿನ್ನೆ ರಾತ್ರಿಯೇ ಅವರ ತಂದೆ ಬಂದು ಹಳ್ಳಿಗೆ ಕರೆದೊಯ್ದನು ಎಂದು ವ್ಯಾಪಾರಿ ಹೇಳಿದ. ಊರಿಗೆ ಹೋದ ಶಾಂತಿ – **ವರದಕ್ಷಿಣೆ ಕೊಡಲಾರದ ತಂದೆ–ತಾಯಿ, ನಾಲ್ಕು ಜನ ಮೊಮ್ಮಕ್ಕಳಿರುವ ಮುದುಕನನ್ನು ಮದುವೆಯಾಗಲಾರದೆ ಆತ್ಮಹತ್ಯೆ ಮಾಡಿಕೊಂಡು ಸತ್ತಿದ್ದ ವಿಚಾರ** ಸೀತೆಗೆ ಅವಳು ನೀಡಿದ ಕಾಗದದಿಂದ ತಿಳಿದ ಆ ಹುಡುಗ ತನ್ನೂರಿಗೆ ಬಂದ, ಮನೆಯಲ್ಲಿ ಆತನ ತಂಗಿ ವಿಜಯಾ ಒಂದು ಪೇಪರನ್ನು ನೋಡುತ್ತಿದ್ದಳು, ಅದು ಏನೆಂದು

ಕಸಿದುಕೊಂಡು ನೋಡಲು – ನೀನು ನೋಡುತ್ತಿದ್ದದ್ದು ನೀನು ಕೊಂದ ಹುಡುಗಿ ಎಂದಳು! ಪೇಪರ್‌ನಲ್ಲಿದ್ದುದು ಶಾಂತಿಯ ಫೋಟೋ, ಅದರ ಕೆಳಗಡೆ **ವರದಕ್ಷಿಣೆಗೆ ಆಹುತಿ!** ಎಂದು ಬರೆದಿತ್ತು, **ಶಾಂತಿಯೇ ನಾನು ಮೊದಲು ಕೈಬಿಟ್ಟ ಕನ್ಯೆ?** ಈಗ ಏನು ಪ್ರಯೋಜನ? ಕಾಲ ಮಿಂಚಿಹೋಗಿತ್ತು.

**ಗಿರಿಬಾಲೆ ಹೆಸರಿನಿಂದ ಬರೆದ ಸರಸ್ವತಿದೇವಿ ರಾಜವಾಡೆ**ಯವರು – ಕ್ರೌರ್ಯ, ಸ್ವಾರ್ಥ, ಬಡತನ, ಡಾಂಭಿಕತೆ, ಮೌಢ್ಯತೆಗಳನ್ನು ಕಟುವಾಗಿ ಟೀಕಿಸಿದರು. ಅನ್ಯಾಯದ ವಿರುದ್ಧ ಬಂಡೇಳುವ ಗಟ್ಟಿತನವನ್ನು ತೋರಿದರು. ಎಚ್.ವಿ.ಸಾವಿತ್ರಮ್ಮ, ಶ್ಯಾಮಲಾದೇವಿ ಬೆಳಗಾಂವಕರವರ ಕೃತಿಗಳು – ಸಾಮಾಜಿಕ ಸಮಸ್ಯೆಗಳಿಗೆ ಕಲಾತ್ಮಕ ರೂಪವನ್ನೀಯುವ ಹವಣಿಕೆ, ಸಂಕ್ಷಟ ಪರಿಸ್ಥಿತಿಯಲ್ಲಿ ಪುರುಷರ ಪಲಾಯನವಾದ, ಸ್ವಾರ್ಥ ಅವಿಶ್ವಾಸಗಳನ್ನು ಕುರಿತಾಗಿ ಗಮನಕ್ಕೆ ತಂದವು.

ಕಾತ್ಯಾಯಿನಿ ತಮ್ಮ ಕೃತಿಯೊಂದರಲ್ಲಿ **ಹೆಣ್ಣಿನ ಮುಕ್ತಿಗೆ, ಸುಖಕ್ಕೆ, ಗಂಡ–ಮನೆ–ಮಕ್ಕಳು ಮಾತ್ರವಲ್ಲ ಅದರಿಂದಾಚೆಗೂ ಇನ್ನೂ ಒಂದು ವಿಶಾಲ ಜಗತ್ತಿದೆ** ಎಂಬುದನ್ನು ಸಾರಿದರು. ಶಾಂತಾದೇವಿ ಮಾಳವಾಡ, ಸರಸ್ವತಿದೇವಿ ಗೌಡರ, ಜಯದೇವಿತಾಯಿ ಲಿಗಾಡೆ, ಗೀತಾ ಕುಲಕರ್ಣಿ ಮುಂತಾದವರು.., ಸ್ತ್ರೀಯನ್ನು ಸಮಾನಭಾವದಿಂದ ಕಾಣಬೇಕೇ ಹೊರತು ಕನಿಕರದಿಂದಲ್ಲ ಎಂದು ಪ್ರತಿಪಾದಿಸಿ ಕತೆ, ಕಾದಂಬರಿಗಳನ್ನು ಬರೆದರು. ಇದನ್ನು ಸಾಹಿತ್ಯಲೋಕದ ಒಂದು ಮೈಲಿಗಲ್ಲು ಎಂದು ಹೇಳಬಹುದು. ಬಡವರು ಮತ್ತು ಅಂಧವಿಶ್ವಾಸಿಗಳಿಂದ ತುಂಬಿದ ಸಮಾಜದಲ್ಲಿ ಬಡತನ ಮತ್ತು ಕುರೂಪಗಳನ್ನು ಮಾತ್ರ ತನ್ನ ಆಸ್ತಿಯಾಗಿ ಪಡೆದ ಓರ್ವ ಸ್ತ್ರೀಗೂ ತನ್ನ ಭ್ರಮೆಯ ಆಧಾರದ ಮೇಲೆ ದೈವವಾಗಿ ಬದಲಾಗಿ ಅನುಯಾಯಿಗಳನ್ನೂ ಹಣವನ್ನೂ ಸಂಪಾದಿಸಲು ಸಾಧ್ಯವಾಗುವ ಹಾಗೂ ಸಹಾನುಭೂತಿ ಮತ್ತು ಪರಿಹಾಸ್ಯಗಳೊಂದಿಗೆ ಈ ಸ್ಥಿತಿಯನ್ನು ನೋಡುವುದನ್ನು ಶಾಂತಾದೇವಿ ಕಣವಿಯವರ ಕತೆಗಳಲ್ಲಿ ಕಾಣುತ್ತೇವೆ.

ನಂತರದ ದಿನಗಳಲ್ಲಿ ಮಹಿಳಾ ಸಂವೇದನೆಯ ಅನೇಕ ಮುಖಗಳು ತ್ರಿವೇಣಿ, ಎಂ.ಕೆ.ಇಂದಿರಾ ಮುಂತಾದವರ ಮೂಲಕ ಸಮರ್ಥವಾಗಿ ಮುಖ್ಯವಾಹಿನಿಯಾಗಿ ಅನಾವರಣಗೊಂಡವು. ತ್ರಿವೇಣಿಯವರಂತೂ ಮಹಿಳೆಯ ಮನಸ್ಸನ್ನೇ ವಿಶ್ಲೇಷಿಸಿದರು. ಮನೋವೈಜ್ಞಾನಿಕ ಸಮಸ್ಯೆಗಳನ್ನು ತಮ್ಮ ಕಾದಂಬರಿಗಳಲ್ಲಿ ಚರ್ಚಿಸಿದರು. ಇದು ಕನ್ನಡ ಸಾಹಿತ್ಯದಲ್ಲಿ ಆದಂಥ ಗುರುತರವಾದ ಬದಲಾವಣೆ ಎಂದೇ ಹೇಳಬಹುದು. ಅಡುಗೆಮನೆಯ ಸಾಹಿತ್ಯ ಎಂದು ಅವಹೇಳನ ಮಾಡುತ್ತಿದ್ದವರ ಬಾಯಿ ಮುಚ್ಚಿತು. ಎಂ.ಕೆ.ಇಂದಿರಾ ಅವರು ವೇಶ್ಯಾ ಸಮಸ್ಯೆಯ ಬಗ್ಗೆ ಬರೆದ ಗೆಜ್ಜೆಪೂಜೆ ಕಾದಂಬರಿ ಮಹಿಳಾ ಮನೋಲೋಕದಲ್ಲಿ ಒಂದು ವಿಪ್ಲವವನ್ನೇ ತಂದಿತು. ತರುವಾಯ ಇದೇ ಹಾದಿಯಲ್ಲಿ ನಡೆದು ಮುಂದೆ ಆಧುನಿಕತೆಯ ಪ್ರಭಾವಿತರಾದ ಕಾದಂಬರಿಗಾರ್ತಿಯರು – ಎಚ್.ಜಿ.ರಾಧಾದೇವಿ, ಸಾಯಿಸುತೆ, ಅನುಪಮಾ ನಿರಂಜನ, ಉಷಾ ನವರತ್ನರಾಮ್ ಇವರ ಕಾದಂಬರಿಗಳಲ್ಲಿ ಮಹಿಳೆಯರ ಸಮಸ್ಯೆಗಳು, ಮಹಿಳಾ ಸ್ವಾತಂತ್ರ್ಯದ ಮಹತ್ವ, ಸ್ವೇಚ್ಛೆಗೂ ಸ್ವಾತಂತ್ರ್ಯಕ್ಕೂ ನಡುವೆ ಇರುವ ಅಂತರದ ಬಗ್ಗೆ; ಮಹಿಳೆಗೆ ಆಧುನಿಕತೆಯ ಜೊತೆಜೊತೆಗೆ ಸಹನೆಯ ಮನೋಭಾವ, ಅನುಸರಿಸಿಕೊಂಡು ಹೋಗುವ ಸ್ವಭಾವಗಳ ಮಹತ್ವವನ್ನು ಕೂಡ ಇವರೆಲ್ಲರ ಕಾದಂಬರಿಗಳು ವಿವರಿಸಿದವು.

ಇತ್ತೀಚಿನ ದಿನಗಳಲ್ಲಿ ಹೀಗೆ ಮಹಿಳಾ ಸಾಹಿತ್ಯದ ಪರಂಪರೆಯನ್ನು ಮುರಿದು ಕಟ್ಟುವ ಪ್ರಯತ್ನಕ್ಕೆ ಮುಂದಾದ ಲೇಖಕಿಯರಲ್ಲಿ ಗೀತಾ ನಾಗಭೂಷಣ, ವೀಣಾ ಶಾಂತೇಶ್ವರ, ಬಿ.ಟಿ.ಲಿಲತಾ ನಾಯಕ, ವೈದೇಹಿ, ಸಾರಾ ಅಬೂಬಕ್ಕರ್, ಸುಧಾಮೂರ್ತಿ, ನೇಮಿಚಂದ್ರ, ಬಾನು ಮುಷ್ತಾಕ್, ಪ್ರತಿಭಾ ನಂದಕುಮಾರ, ಮುಂತಾದವರು ತಮ್ಮ

ಕಥೆ–ಕಾದಂಬರಿಗಳಲ್ಲಿನ ಕಥಾನಾಯಕಿಯರು ಪುರುಷಪ್ರಧಾನ ವ್ಯವಸ್ಥೆಯ ಎದುರು ಸೋಲೊಪ್ಪಿಕೊಳ್ಳದೆ, ಪ್ರಶ್ನಿಸತೊಡಗಿದರು, ಶೋಷಣೆಯನ್ನು ವಿರೋಧಿಸಿ ಹೊರಬರುವ ಹೊಸಬಗೆಯ ಪ್ರಯತ್ನಗಳನ್ನು ಮಾಡಿದರು. ಇದು ಮಹಿಳಾ ಕಥಾಸಾಹಿತ್ಯದ ಹೊಸತಿರುವು ಎಂದು ಹೇಳಬಹುದು.

ಇದುವರೆಗೂ ಕೇವಲ ಮಧ್ಯಮ ವರ್ಗದ ಮಹಿಳೆಯರ ಸಮಸ್ಯೆಗಳನ್ನು ಮಾತ್ರ ತಮ್ಮ ಬರೆವಣಿಗೆಯ ವಸ್ತುವನ್ನಾಗಿಸಿಕೊಳ್ಳುತ್ತಿದ್ದ ಲೇಖಕಿಯರು ಈಗ ಕೆಳವರ್ಗದ ಮಹಿಳೆಯರ ಸಮಸ್ಯೆಗಳಿಗೂ ಲೇಖನಿಯಾದರು. ಮುಂದಿನದು ಕಾರ್ಪೋರೇಟ್ ಜಗತ್ತಿನ ಅನಾವರಣ, ಅಲ್ಲಿನ ಶೋಷಣೆಯನ್ನು ಕನ್ನಡ ಸಾಹಿತ್ಯಕ್ಕೆ ಪರಿಚಯಿಸಿದವರಲ್ಲಿ ನೇಮಿಚಂದ್ರರು ಅಗ್ರಗಣ್ಯರು.

ಸಮಾಜದ ಸ್ವರೂಪವನ್ನು ವಿಮರ್ಶೆಗೊಳಪಡಿಸಿದ ಕನ್ನಡ ಕಥಾಸಾಹಿತ್ಯವು ಮಾನವನ ವಿಕಾಸ, ಕೌಟುಂಬಿಕ ಪಲ್ಲಟ, ಹೆಣ್ಣು–ಗಂಡುಗಳ ಸಂಬಂಧ ಹಾಗೂ ಸಮಾಜದ ರಚನೆಯ ಹಿಂದಿನ ಮೌಲ್ಯಗಳನ್ನು ಪರಂಪರೆ ಎಂದು ನಂಬಿಕೊಂಡು ಬರುವ ಕಾಲಮಾನದಲ್ಲಿ ಹೆಣ್ಣಿನ ಸಂವೇದನೆಯನ್ನು ಪುರುಷಕೇಂದ್ರಿತ ಸಾಮಾಜಿಕ ವ್ಯವಸ್ಥೆಯಲ್ಲಿಯೇ ಕಟ್ಟುವ ಕಾರ್ಯವನ್ನು ಬಹುತೇಕ ಕನ್ನಡದ ಕತೆಗಾರ್ತಿಯರು ಮಾಡಿದ್ದು ಶ್ಲಾಘನೀಯ ಕಾರ್ಯವಾಗಿದೆ.

**ಪರಾಮರ್ಶನ ಗ್ರಂಥಗಳು**


- *ಅಕ್ಕಮಹಾದೇವಿಯ ವಚನಗಳು.* ಕಣಜ ಅಂತರ್ಜಾಲ ತಾಣ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ.

  https://kanaja.karnataka.gov.in/vachanasahitya/ಅಕ್ಕ-ಮಹಾದೇವಿ-ವಚನಗಳು/
- ಕೊಡಗಿನ ಗೌರಮ್ಮ. (2008). *ಕೊಡಗಿನ ಗೌರಮ್ಮನವರ ಸಮಗ್ರ ಸಣ್ಣ ಕಥೆಗಳು.* ಅನನ್ಯ ಪ್ರಕಾಶನ.
- ರಂಗನಾಥ ಶರ್ಮ, ಎನ್. (ಗದ್ಯಾನುವಾದ) (2011). *ಸಂಚಿಯ ಹೊನ್ನಮ್ಮ ವಿರಚಿತ ಹದಿಬದೆಯ ಧರ್ಮ.* ಕನ್ನಡ ಸಾಹಿತ್ಯ ಪರಿಷತ್ತು
- ಶಾಂತಾಬಾಯಿ ನೀಲಗಾರ. (1908). *ಸದ್ಗುಣಿ ಕೃಷ್ಣಬಾಯಿ: ಉತ್ತಮ ಗೃಹಿಣಿ*
- ಶ್ರೀಮತಿ, ಎಚ್.ಎಸ್. *ಆಧುನಿಕ ಮಹಿಳಾ ಚರಿತ್ರೆ*